
# ಬೀಗದೆ ಬಾಗಬೇಕು!

**ಬಾಗಿಲೊಳ**
ಬಾಗಿಲೊಳಬಾಗಿಲೊಳ
ಬಾಗಿಲಾಚೆ
ಪ್ರಕೃತಿಯ ಮುಂದೆ
ಬಾಗಿ ನಿಲ್ಲುವಾಸೆ
ಇಲ್ಲ, ಬಾಗಿ ನಮಿಸುವಾಸೆ

ಉಸಿರು ಕಟ್ಟುವ ಬದುಕಿಗೆ
ಹಸಿರೆರಚಲು ಬಸಿರಾಗಿ
ನೆಮ್ಮದಿಯನು ಕಾಪಿಟ್ಟು
ಕಾಪಾಡಿ ಉಣಿಸುವ
ಈ ಪ್ರಕೃತಿಯ ಉದಾರತೆಯ
ಮುಂದೆ ಮತ್ತೆ ಮತ್ತೆ ಕುಬ್ಜನಾಗುವ
ಈ ಪರಿಗೆ ಬೇರೇನೂ ತೋಚದೆ

ಒಮ್ಮೆ ಬಾಗಿ ವಂದಿಸಿ
ರಕ್ಷಿಸುವ ಪ್ರಕೃತಿಯ
ಸಂರಕ್ಷಿಸುವ ವಚನ ನೀಡಿ
ಆ ದಿಸೆಯಲ್ಲಿ
ನಡೆಯಲೇಬೇಕು... ನಾಶವಾಗುವುದನು
ತಡೆಯಲೇಬೇಕು!

● **ತಲಕಾಡು ಶ್ರೀನಿಧಿ**



# ಅರಿವಿನ ಮರ!

**ನಿನಗಾಗಿ** ಹಂಬಲಿಸಿ
ಮನೆ ಬಾಗಿಲು ತೆರೆದೆ
ಮನದ ಬಾಗಿಲೂ ತೆರೆದೆ
ಮೌಢ್ಯದ ಬಾಗಿಲು ಒಡೆದೆ!
ನೀನಲ್ಲಿ ಬಿಸಿಲಲ್ಲಿ
ಒಂಟಿಗಾಲಲ್ಲಿ ನಿಂತು
ತಪವ ಮಾಡುತ್ತಿದ್ದೆ
ಹಸಿರು ಮರವಾಗಿ!
ಹಲವರಿಗೆ ನೆರಳಾಗಿ !!
ಕಲ್ಲೊಗೆದವರಿಗೆ ಹಣ್ಣು ನೀಡುತ್ತ
ಅರಸಿ ಬರುವವರಿಗೆ ಆಸರೆಯಾದೆ !
ಚಳಿಗೆ ಎಲೆ ಉದುರಿದರೂ
ಬಿಸಿಲಿಗೆ ಬಾಡಿ ಒಣಗಿದರೂ
ಮಳೆಗೆ ಮತ್ತೆ ಚಿಗುರುತ್ತ
ಹೂ ಬಿಡುತ್ತ, ಹಣ್ಣು ನೀಡುತ್ತ
ಮರವಾಗಿ ಅರಿವಿನ
ವರ ನೀಡುವ ತಾಯಾದೆ!
ಶಿರಬಾಗಿ ನಮಿಸುತ್ತ ನಾ ಮಗುವಾದೆ !!

● **ವಿಜಯಾ ಶ್ರೀಧರ್**